1

ಯೋನಿಕುಂಡ ರಚನಾ ಕ್ರಮ

ಏಕಹಸ್ತಪ್ರಮಾಣದಲ್ಲಿ ಯೋನಿಕುಂಡ ರಚನೆ.

(ಹಸ್ತ = ೨೪ ಅಂಗುಲ = ೧೮ ಇಂಚು = ೧.೫ ಫೂಟು)

1.ವೃತ್ತರಚನೆ:

1 ವ್ಯಾಸ(DF) ೨೫.೩೫ ಇಂಚು, ತ್ರಿಜ್ಯ(OD)
೧೨.೬೭ ಇಂಚು.
2. ಚತುರಸ್ರ ರಚನೆ: ಮೊದಲು ರಚಿಸಿದ ವೃತ್ತದಲ್ಲಿ
ದಿಕ್ಕುಗಳನ್ನು ಮತ್ತು ವಿದಿಕ್ಕುಗಳನ್ನು ಗುರುತಿಸಿ, ಎಲ್ಲಾ ವಿದಿಕ್ಕುಗಳನ್ನು ಸೇರಿಸಲಾಗಿ ಚಚ್ಚೌಕ ಸಿದ್ಧವಾಗುತ್ತದೆ. ಈ ಚಚ್ಚೌಕದ ಒಂದು ಭುಜಮಾನ(GD) = ೧೮ ಇಂಚುಗಳಿರುತ್ತವೆ.
3. ಪೃಷ್ಠ ರಚನೆ: ಚತುರಶ್ರವನ್ನು ಪೂರ್ವಾದಿ
ದಿಗ್ಗ್ರೇಖೆಗಳಿಂದ ನಾಲ್ಕು ಭಾಗ ಮಾಡಿ, ಕೆಳಗಿನ ಎರಡು ಭಾಗಗಳಿಗೆ (ನೈರುತ್ಯ ಮತ್ತು ವಾಯವ್ಯ ಚೌಕಗಳಿಗೆ) ಮಧ್ಯಬಿಂದುವನ್ನು ಗುರುತಿಸಬೇಕು. ಈ ಬಿಂದುವಿನಿಂದ(X,Y) ವೃತ್ತರಚಿಸಿದಾಗ ಅವು ಒಂದನ್ನೊಂದು ಛೇದಿಸಿಕೊಂಡು ಹೋಗಿ, ಆ ಯೋನಿ ಕುಂಡದ ಪೃಷ್ಠ ಸಿದ್ಧವಾಗುತ್ತದೆ.
4. ಅಗ್ರರಚನೆ: ವೃತ್ತಾಂತರ್ಗತ ಚಚ್ಚೌಕದ ಪೂರ್ವ
ಬಿಂದುವಿನಿಂದ(C) ಮುಂದೆ ಪೂರ್ವಾಗ್ರವಾಗಿ ಚೌಕ ಭುಜಮಾನದ ೧/೫ ಅಂಶವನ್ನು (೧೮ ಇಂಚು + ೩.೬ ಇಂಚು) ಹೆಚ್ಚಿಸಬೇಕು. ಹೆಚ್ಚಿಸಿದ(CA) ರೇಖಾಗ್ರ ಬಿಂದುವಿಗೆ(A) ಉತ್ತರ ದಕ್ಷಿಣ ದಿಗ್ವೃತ್ತದ (ಪೃಷ್ಠ ವೃತ್ತದ) ಭಾಗವನ್ನು ಸೇರಿಸಬೇಕು. ಹೀಗೆ ಸೇರಿದಾಗ ಯೋನಿ ಕುಂಡದ ತುದಿ ಸಿದ್ಧವಾಗುತ್ತದೆ. ಪೃಷ್ಠವೃತ್ತ ಛೇದ ಬಿಂದುವಿನಿಂದ(B) ಯೋನ್ಯಗ್ರ ಬಿಂದುವಿನ ವರೆಗಿನ ಮಾನ (BA) ೨೧.೬ ಇಂಚುಗಳಾಗಿರುತ್ತವೆ.
5. ಖಾತ: ಹೀಗೆ ಯೋನಿ ಕುಂಡಾಕಾರ ಸಿದ್ಧವಾದ ಮೇಲೆ,
ಅದೇ ಆಕಾರದಲ್ಲಿ ೧೮ ಇಂಚು ಆಳವಾಗಿ ಖಾತವನ್ನು ನಿರ್ಮಿಸಬೇಕು.

1 ಕುಂಡ ಮಂಟಪ ನಿರ್ಮಾಣ ವಿಧಿ ನಿರೂಪಣ ಗ್ರಂಥಗಳಲ್ಲಿ ವೃತ್ತದಿಂದ ಆಕೃತಿ ರಚನೆಯನ್ನು ಹೆಚ್ಚಾಗಿ ಒಪ್ಪುತ್ತಾರೆ.

poornapathi@gmail.com

6. **ನಾಭಿ :** ಖಾತಭಾಗದಲ್ಲಿ ವೃತ್ತ ಮಧ್ಯ ಬಿಂದುವನ್ನು (O) ಗುರುತಿಸಿ , ಅಲ್ಲಿ ೧ .೫ ಇಂಚಿನ ಘನದ ನಿರ್ಮಾಣ ಮಾಡಬೇಕು. ಈ ಘನದ ಮಧ್ಯದಲ್ಲಿ ಹುಕ್ಕಳಿನಾಕಾರದ ಸಣ್ಣ ಕುಳಿಯನ್ನು ಮಾಡಬೇಕು . ಅಥವಾ ೧.೫ ಇಂಚಿನ ಘನಚೌಕದಲ್ಲಿ ಪದ್ಮವನ್ನು ರಚಿಸಲೂ ಬಹುದು .

7. **ಕಂಠ :** ನೆಲದ ಸಮಪಾತಳಿಯಲ್ಲಿ ಯೋನಿ ಕುಂಡ ನಿರ್ಮಿಸಿದ ಮೇಲೆ , ಯೋನ್ಯಾಕಾರದ ಹೊರಗೆ O .೭೫ ಇಂಚು ನೆಲದ ಭಾಗವನ್ನು ಬಿಟ್ಟು ಅದರ ಹೊರಗೆ ಮೇಖಲೆಯನ್ನು ನಿರ್ಮಿಸಬೇಕು . ಹೀಗೆ ಬಿಟ್ಟ O .೭೫ ಇಂಚಿನ ನೆಲದ ಭಾಗವೇ ಕಂಠವೆನಿಸುತ್ತದೆ .

8. **ಮೇಖಲೆ :** ಮೊದಲ ಮೇಖಲೆಯು ೬.೭೫ ಇಂಚು ಎತ್ತರವೂ , ೪.೫ ಇಂಚು ಅಗಲವೂ ಇರಬೇಕು. ಎರಡನೇ ಮೇಖಲೆಯು ೪.೫ ಇಂಚು ಎತ್ತರವೂ ೨ .೨೫ ಇಂಚು ಅಗಲವೂ ಇರಬೇಕು. ಇನ್ನು ಮೂರನೇ ಮೇಖಲೆಯು ೨.೨೫ ಇಂಚು ಎತ್ತರವೂ , ೨.೨೫ ಇಂಚು ಅಗಲವೂ ಇರಬೇಕು.

9. **ಯೋನಿ[2] :** ಯೋನ್ಯೇತರ ಏಕಹಸ್ತ ಕುಂಡಗಳಲ್ಲಿ ಯೋನಿಯ ಅಳತೆ, ಪೃಷ್ಠ ಛೇದಕ ಬಿಂದುವಿನಿಂದ ಯೋನ್ಯಗ್ರ ಬಿಂದುವಿನ ವರೆಗೆ ೬ .೭೫ ಇಂಚುಗಳೆಂದೂ , ಪೃಷ್ಠ ಛೇದಕ ಬಿಂದುವಿನಿಂದೊಡಗೂಡಿದ ಅಗಲ ರೇಖಾ ಮಾನ (*FBE*) ೬.೦ ಇಂಚುಗಳೆಂದೂ ವಿವರಿಸಿದ್ದಾರೆ .

10. **ಹಸ್ತಭೇದ ವಿಚಾರ :** ದ್ವಿಹಸ್ತದ ಯೋನಿ ಕುಂಡಕ್ಕೆ ವ್ಯಾಸ = ೩೫.೭೦ ಮತ್ತು ತ್ರಿಜ್ಯ = ೧೭.೮೫ ಇಂಚುಗಳಿರಬೇಕು . ಅಲ್ಲಿ ಚತುರ್ಭುಜದ ಭುಜಮಾನ ೨೫ .೩೫ ಇಂಚುಗಳಿರುತ್ತವೆ .

ಚತುರ್ಹಸ್ತದ ಯೋನಿ ಕುಂಡಕ್ಕೆ ವ್ಯಾಸ = ೫೦.೭೦ ಇಂಚುಗಳು ಮತ್ತು ತ್ರಿಜ್ಯ = ೨೫.೩೫ ಇಂಚುಗಳಿರಬೇಕು . ಅಲ್ಲಿ ಚತುರ್ಭುಜದ ಒಂದು ಭುಜಮಾನ = ೩೬ ಇಂಚುಗಳಿರುತ್ತವೆ .

ಸಂಗ್ರಾಹಕಃ

ಪರಮೇಶ್ವರ ಪುಟ್ಟನಮನೆ

[2] ಪದ್ಮಕುಂಡಕ್ಕೆ ನಾಭಿ ಇರುವುದಿಲ್ಲ , ಯೋನಿ ಕುಂಡಕ್ಕೆ ಯೋನಿಯ ಅಗತ್ಯವೂ ಇಲ್ಲ ! ಎಂದು ಬಹುಗ್ರಂಥಗಳು ಪ್ರತಿಪಾದಿಸಿವೆ .

poornapathi@gmail.com



poornapathi@gmail.com